ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/6/ಇಎಸ್‌ಟಿ(1)ಎ/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 17-05-2018

ಈ ದಿನವೇ

## ಸುತ್ತೋಲೆ

-*-

ಸಿವಿಲ್ ಅಪೀಲು ಸಂಖ್ಯೆ: 2368/2011 - ಬಿ.ಕೆ. ಪವಿತ್ರ ಮತ್ತಿತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರೆ ಸಿವಿಲ್ ಅಪೀಲುಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನನ್ವಯ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಮತ್ತು ಸುತ್ತೋಲೆಗಳನ್ವಯ ರಚಿಸಲಾದ ತಾಂತ್ರಿಕ ಶಿಕ್ಷಣ ಇಲಾಖೆಯ ಸೇವೆಗೆ ಸೇರಿದ ಅಧಿಕಾರಿಗಳು / ಸಿಬ್ಬಂದಿಗಳ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯಂತೆ ಅಧಿಕಾರಿಗಳು / ಸಿಬ್ಬಂದಿಗಳಿಗೆ ಹಿಂಬಡ್ತಿ / ಮುಂಬಡ್ತಿಯನ್ನು ಕೆಳಕಂಡ ಆದೇಶಗಳಲ್ಲಿ ನೀಡಲಾಗಿದೆ.

- ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/098/ಟಿಪಿಇ/2018, ದಿನಾಂಕ: 17-04-2018.
- ನಿರ್ದೇಶನಾಲಯದ ಅಧಿಕೃತ ಜ್ಞಾಪನ ಸಂಖ್ಯೆ: ಡಿಟಿಇ/5/ಇಎಸ್‌ಟಿ(1)ಎ/2018-19, ದಿ: 17.04.2018.
- ನಿರ್ದೇಶನಾಲಯದ ಅಧಿಕೃತ ಜ್ಞಾಪನ ಸಂಖ್ಯೆ: ಡಿಟಿಇ/5/ಇಎಸ್‌ಟಿ(5)/2018-19, ದಿ: 17.04.2018.
- ನಿರ್ದೇಶನಾಲಯದ ಅಧಿಕೃತ ಜ್ಞಾಪನ ಸಂಖ್ಯೆ: ಡಿಟಿಇ/6/ಇಎಸ್‌ಟಿ(5)/2018-19, ದಿ: 17.04.2018.

ಮೇಲ್ಕಂಡ ಆದೇಶಗಳನ್ವಯ ಹಿಂಬಡ್ತಿ / ಮುಂಬಡ್ತಿ ಹೊಂದಿರುವ ಅಧಿಕಾರಿ / ಸಿಬ್ಬಂದಿಗಳು ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ-2018 ರ ಚುನಾವಣಾ ಕೆಲಸದಲ್ಲಿ ನಿರತರಾಗದೇ ಇರುವ ಸಿಬ್ಬಂದಿಗಳನ್ನು ಕೂಡಲೇ ಬಿಡುಗಡೆ ಮಾಡಲು ಹಾಗೂ ಚುನಾವಣಾ ಕೆಲಸದಲ್ಲಿ ಕಾರ್ಯನಿರತರಾಗಿರುವ ಸಿಬ್ಬಂದಿಗಳನ್ನು ಮಾದರಿ ನೀತಿ ಸಂಹಿತೆ ಮುಕ್ತಾಯಗೊಂಡ ಮರುದಿನವೇ ಕರ್ತವ್ಯದಿಂದ ಬಿಡುಗಡೆ ಮಾಡಲು ಸಂಬಂಧಪಟ್ಟವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/098/ಟಿಪಿಇ/2018, ದಿನಾಂಕ: 17.04.2018 ಹಾಗೂ ನಿರ್ದೇಶನಾಲಯದ ವಿಶೇಷ ಸೂಚನೆ ಪತ್ರ ಸಂಖ್ಯೆ: ಡಿಟಿಇ/06/ಇಎಸ್‌ಟಿ(5)/2018-19, ದಿ: 17.04.2018 ರಲ್ಲಿ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಆದಕಾರಣ ಹಿಂಬಡ್ತಿ / ಮುಂಬಡ್ತಿ ಹೊಂದಿರುವ ಅಧಿಕಾರಿ / ಸಿಬ್ಬಂದಿಗಳು ಕಾರ್ಯವಿಮುಕ್ತಿ / ಕಾರ್ಯವರದಿ ಮಾಡಿಕೊಂಡಿರುವ ಬಗ್ಗೆ ವರದಿಯನ್ನು ಇಂದೇ ನಿರ್ದೇಶನಾಲಯಕ್ಕೆ ಮತ್ತು ಕೆಳಕಂಡ ಇ-ಮೇಲ್ ವಿಳಾಸಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

ಇ-ಮೇಲ್ ವಿಳಾಸ: est1adte@gmail.com

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಗೆ:-**

ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ;

**ಪ್ರತಿ:-**

1. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು);
2. ಕಛೇರಿ ಪ್ರತಿ ಕಡತಕ್ಕೆ.

IL-18-19